# ಕರ್ನಾಟಕ ಸರ್ಕಾರ

## (ಕೃಷಿ ಇಲಾಖೆ)

ಸಂ:ಕೃಇ/ಆತ್ಮ/ಸಮೇತಿ/ತರಬೇತಿ/2020-21

ಕೃಷಿ ನಿರ್ದೇಶನಾಲಯ,
ಶೇಷಾದ್ರಿ ರಸ್ತೆ, ಬೆಂಗಳೂರು-1
ದಿನಾಂಕ : 29-06-2020

ಇವರಿಗೆ:-

ನಿರ್ದೇಶಕರು, ಸಮೇತಿ (ಉ/ದ) ಹಾಗೂ
ವಿಸ್ತರಣಾ ನಿರ್ದೇಶಕರು, ಕೃ.ವಿ.ವಿ.,
ಬೆಂಗಳೂರು/ಧಾರವಾಡ.

ಮಾನ್ಯರೇ,

**ವಿಷಯ:- ಆತ್ಮ ಯೋಜನೆ 2020-21ನೇ ಸಾಲಿನ ಕ್ರಿಯಾಯೋಜನಾ ಅನುಷ್ಠಾನದ ಅನುಮೋದನೆ ಕುರಿತು.**

**ಉಲ್ಲೇಖ:- 1. ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ಬೆಂಗಳೂರು ಇವರ ನಡವಳಿಗಳು, ದಿ:20.06.2020**

**2. ರಾಜ್ಯ ಸರ್ಕಾರದ 2020-21ನೇ ಸಾಲಿನ ಚಾಲ್ತಿ ಯೋಜನೆಗಳ ಮುಂದುವರಿಕೆ ಆದೇಶ ದಿ:02.06.2020.**

*~*~*~*~*~*

ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದನ್ವಯ, ರಾಜ್ಯ ಮಟ್ಟದ ಅನುದಾನ ಮಂಜೂರಾತಿ ಸಮಿತಿ ಸಭೆ (SLSC) ಅಧ್ಯಕ್ಷರು ಹಾಗೂ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಇವರ ದಿ:20.06.2020ರ ನಡವಳಿಗಳನ್ವಯ ಆತ್ಮ ಕ್ರಿಯಾಯೋಜನೆ 2020-21ಕ್ಕೆ ಅನುಮೋದನೆಯಾಗಿರುತ್ತದೆ. ಅದರನ್ವಯ ಎರಡು ಸಮೇತಿ ಕೇಂದ್ರಗಳಿಗೆ 2020-21ನೇ ಸಾಲಿನ ಕ್ರಿಯಾಯೋಜನೆಯ ರೂಪರೇಷೆಗಳನ್ನು ಈ ಪತ್ರದೊಂದಿಗೆ ಮುಂದಿನ ಅಗತ್ಯ ಕ್ರಮಕ್ಕಾಗಿ ಲಗತ್ತಿಸಿ ಕಳುಹಿಸಿದೆ.

ಈ ವಿಷಯದಲ್ಲಿ ಈಗಾಗಲೇ ಮಂಜೂರಾಗಿರುವ ಗುತ್ತಿಗೆ ಸಿಬ್ಬಂದಿ ಸೇರಿದಂತೆ ಉಪ ನಿರ್ದೇಶಕರು ಹುದ್ದೆಗಳ ಸಂಖ್ಯೆಯನ್ನು ಮೂರಕ್ಕೆ ಸೀಮಿತಗೊಳಿಸುತ್ತಾ ಈಗಾಗಲೇ ದಿ:10.06.2020ರ ಪತ್ರದಲ್ಲಿ ಸೂಚಿಸಿರುವಂತೆ ನಿಯೋಜಿಸಿಕೊಂಡು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವಂತೆ ಸೂಚಿಸಿದೆ. ಸಮೇತಿ ಮೂಲಕ ಸಮಯಾನುಸಾರ SREP ಅನುಷ್ಠಾನ, ದಾಖಲಾತಿ ನಿರ್ವಹಣೆ, ಸಲಹಾ ಸಮಿತಿಗಳ ರಚನೆ, ಕ್ಷೇತ್ರಮಟ್ಟದಲ್ಲಿ ಆತ್ಮ ಚಟುವಟಿಕೆಗಳ ಪರಿಶೀಲನೆ ಇತ್ಯಾದಿ ಚಟುವಟಿಕೆಗಳ ಕುರಿತು ಮಾರ್ಗದರ್ಶನ ಹಾಗೂ ಸಲಹೆಸೂಚನೆಗಳನ್ನು ನೀಡುವಂತೆ ಸೂಚಿಸಿದೆ.

ಮುಂದುವರೆದು, 2020-21ನೇ ಸಾಲಿನ ಭೌತಿಕ ಹಾಗೂ ಆರ್ಥಿಕ ಗುರಿಗಳನ್ವಯ ಈ ಕೆಳಕಂಡ ಅಂಶಗಳನ್ನು ಪರಿಗಣಿಸಿ ಅನುಷ್ಠಾನ ಮಾಡುವಂತೆ ಸೂಚಿಸಲಾಗಿದೆ.

1. ತರಬೇತಿಗಳನ್ನು ಆತ್ಮ ಮಾರ್ಗಸೂಚಿ-2018ರ ನಿಯಮಗಳನ್ವಯ ನಿಗದಿಪಡಿಸಿರುವ ಮಾನವದಿನಗಳಿಗೆ ಗುರಿಯನ್ನು ಪೂರ್ಣಗೊಳಿಸುವುದು ಹಾಗೂ ದಿ:15.05.2020ರ ಪತ್ರದಲ್ಲಿ ನೀಡಿರುವ ಕೇಂದ್ರ ಸರ್ಕಾರದ ಸೂಚನೆಗಳನ್ನು ಅನುಷ್ಠಾನಮಾಡುವುದು.
2. ಗುತ್ತಿಗೆ ಆಧಾರಿತ ಸಿಬ್ಬಂದಿಯನ್ನು ಈ ಕಛೇರಿಯ ಪತ್ರದಲ್ಲಿ ಸೂಚಿಸಿರುವಂತೆ ಹೊರಗುತ್ತಿಗೆ ಸೇವಾ ಸಂಸ್ಥೆಯಿಂದ ಆತ್ಮ ಮಾರ್ಗಸೂಚಿ-2018ರಲ್ಲಿ ಸೂಚಿಸಿರುವಂತೆ ವಿದ್ಯಾರ್ಹತೆ, ಅನುಭವ ಇತ್ಯಾದಿಗಳನ್ವಯ ಸೇವೆಯನ್ನು ಪಡೆಯುವುದು.
3. ಗುತ್ತಿಗೆ ಸಿಬ್ಬಂದಿ ಸೇವೆಗಳನ್ನು ಪಡೆಯುವಾಗ ಅಭ್ಯರ್ಥಿಗಳನ್ನು ನಿರ್ದೇಶಕರು, ಸಮೇತಿ ಹಾಗೂ ಕೇಂದ್ರ ಕಛೇರಿಯಿಂದ ಅಪರ ಕೃಷಿ ನಿರ್ದೇಶಕರು/ಅವರ ಪ್ರತಿನಿಧಿಯೊಂದಿಗೆ ಸಮೇತಿಯ ಸಂಯೋಜಕರು ಸಂದರ್ಶನ ಏರ್ಪಡಿಸಿ ಆಯ್ಕೆ ಮಾಡುವಲ್ಲಿ ಕ್ರಮವಹಿಸಬೇಕು.
4. ಉಪ ನಿರ್ದೇಶಕರುಗಳನ್ನು ಕೃಷಿ ವಿಸ್ತರಣಾ(ಕೃಷಿ/ತೋಟಗಾರಿಕೆ)ಕ್ಷೇತ್ರದಲ್ಲಿ, ಪಶು ಸಂಗೋಪನಾ ಕ್ಷೇತ್ರದಲ್ಲಿ ಹಾಗೂ ಕೃಷಿ ಮಾರುಕಟ್ಟೆ ಕ್ಷೇತ್ರಗಳಲ್ಲಿ ಜೊತೆಗೆ ಕಂಪ್ಯೂಟರ್ ಜ್ಞಾನವುಳ್ಳವರನ್ನು ಮಾತ್ರ ಪ್ರತಿ ಕ್ಷೇತ್ರದಲ್ಲಿ ಒಬ್ಬರಂತೆ ಆಯ್ಕೆ ಮಾಡುವಲ್ಲಿ ಕ್ರಮವಹಿಸುವುದು.
5. ತರಬೇತಿ ವೇಳಾಪಟ್ಟಿ 2020-21ನ್ನು ಸಂಬಂಧಿಸಿದ ಜಿಲ್ಲೆಗಳ ಜಂಟಿ ಕೃಷಿ ನಿರ್ದೇಶಕರಿಗೂ ಮತ್ತು ಕೇಂದ್ರ ಕಛೇರಿಗೂ ಮುಂಜಾಗ್ರತೆಯಾಗಿ(ತ್ವರಿತವಾಗಿ)ಸಲ್ಲಿಸಿ ಕೇಂದ್ರ ಕಛೇರಿಯಿಂದ ಅನುಮೋದನೆ ಪಡೆಯುವುದು.

...2)

6. ತರಬೇತಿಗಳಲ್ಲಿ ಹೆಚ್ಚು ಪ್ರಗತಿಪರ ಆಯ್ದ ರೈತ ಸದಸ್ಯರನ್ನು ಮತ್ತು ಸಂಬಂಧಪಟ್ಟ ಎಲ್ಲಾ ಇಲಾಖೆಗಳ ಅಧಿಕಾರಿಗಳನ್ನು ಸಮಯಾನುಸಾರ ಸಂಪನ್ಮೂಲ ವ್ಯಕ್ತಿಗಳಾಗಿ ಬಳಸಿಕೊಳ್ಳುವುದು.
7. ಕೋವಿಡ್-19ಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರವು ಸೂಚಿಸಿರುವ ಮಾರ್ಗಸೂಚಿಗಳನ್ನು ಅಳವಡಿಸಿಕೊಂಡು ತರಬೇತಿಗಳನ್ನು ಅನುಷ್ಠಾನಮಾಡುವುದು.
8. ಅಗತ್ಯವಿರುವ ಹಾಗೂ ಸಾಧ್ಯವಾದಲ್ಲಿ ಪ್ರತಿ ತರಬೇತಿ ತಂಡದ ಅವಧಿಯಲ್ಲಿ ಒಂದು ದಿನವನ್ನು ಆಯ್ದ ರೈತ ಕ್ಷೇತ್ರಗಳಲ್ಲಿಯೇ ತಾಂತ್ರಿಕತೆಗಳ ಬಗ್ಗೆ ತರಬೇತಿಯನ್ನು ಹಮ್ಮಿಕೊಳ್ಳುವುದು.
9. ತೋಟಗಾರಿಕೆ, ಪಶುಸಂಗೋಪನೆ ಹಾಗೂ ಕೃಷಿ ಯಾಂತ್ರೀಕರಣ ಸಂಬಂಧಿತ ತರಬೇತಿಗಳನ್ನು ಸಂಬಂಧಪಟ್ಟ ಕೃಷಿ ವಿಶ್ವ ವಿದ್ಯಾನಿಲಯಗಳಡಿಯಲ್ಲಿ ನಿಯೋಜಿಸಿ ಅನುಷ್ಠಾನ ಮಾಡಬೇಕು.
10. ಕೇಂದ್ರ ಸರ್ಕಾರದ ದಿ:03-04-2018ರ ಪತ್ರದಲ್ಲಿ ಸೂಚಿಸಿರುವಂತೆ ಸಮ್ಮಿಲನ ತಂತ್ರಗಳು (Convergence Strategies) ಕುರಿತು ಸೂಕ್ತ ಮಾರ್ಗದರ್ಶನ ಹಾಗೂ ಅಗತ್ಯ ಸೂಚನೆಗಳನ್ನು ಕೃ.ವಿ.ಕೆ., ಸಹ ಇಲಾಖೆಗಳು ಮತ್ತು ಎಲ್ಲಾ ಭಾಗಿದಾರರು ನಿರ್ವಹಿಸಲು ಅನುಕೂಲವಾಗುವಂತೆ ಮಾರ್ಗದಂಡಗಳನ್ನು ಜಿಲ್ಲೆಗಳಿಗೆ ನೀಡುವಲ್ಲಿ ಕ್ರಮವಹಿಸುವುದು.
11. ಸಂಬಂಧಪಟ್ಟ ಜಿಲ್ಲಾ ಆತ್ಮ ಯೋಜನಾ ನಿರ್ದೇಶಕರುಗಳೊಂದಿಗೆ ನಿರಂತರ ಸಂಪರ್ಕ ಹೊಂದುವುದು ಮತ್ತು ನಿಗದಿತ ಅಭ್ಯರ್ಥಿಗಳ ನಿಯೋಜನೆಯಾಗುವುದನ್ನು ಖಾತರಿಪಡಿಸಿಕೊಂಡ ನಂತರವೇ ತರಬೇತಿಗಳನ್ನು ಆಯೋಜಿಸುವುದು.
12. ಕೇಂದ್ರ ಕಛೇರಿಯು ಸಮಯಾನುಸಾರ ತಿಳಿಯಪಡಿಸುವ ಸೂಚನೆಗಳನ್ವಯ (ಅಗತ್ಯತೆ ಕಂಡುಬಂದಲ್ಲಿ ವಿಶೇಶ ತರಬೇತಿಗಳನ್ನು / ಕ್ಷೇತ್ರ ಪ್ರವಾಸಗಳು ಇತ್ಯಾದಿ ವಿಸ್ತರಣಾ ಸಂಬಂಧಿತ ಚಟುವಟಿಕೆಗಳು ಸೇರಿದಂತೆ) ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಬೇಕು.
13. ಪ್ರತಿ ತರಬೇತಿಯ ಮತ್ತು ಇತರ ಕಾರ್ಯಕ್ರಮಗಳ ಅನುಷ್ಠಾನದ ನಂತರ ವಿವರವಾದ ವರದಿಯನ್ನು ದಾಖಲಾತಿಗಳನ್ನು, ನಡವಳಿಗಳನ್ನು ಕೇಂದ್ರ ಕಛೇರಿಗೆ ಸಲ್ಲಿಸುವುದು.
14. 2019-20ನೇ ಸಾಲಿನಲ್ಲಿ ಅನುಷ್ಠಾನವಾಗಿರುವ ಚಟುವಟಿಕೆಗಳ ಕುರಿತು ವಾರ್ಷಿಕ ವರದಿಯನ್ನು ಜುಲೈ, 31 ರೊಳಗಾಗಿ ಕೇಂದ್ರ ಕಛೇರಿಗೆ ಸಲ್ಲಿಸಬೇಕು.

01/07/20

**ಕೃಷಿ ಆಯುಕ್ತರು ಹಾಗೂ**
**ರಾಜ್ಯ ನೋಡಲ್ ಅಧಿಕಾರಿಗಳು(ಆತ್ಮ)**
**ಕೃಷಿ ಇಲಾಖೆ, ಕರ್ನಾಟಕ ಸರ್ಕಾರ**

**ಪ್ರತಿಯನ್ನು:-**

1. ವಿಸ್ತರಣಾ ನಿರ್ದೇಶಕರು, ಕೃಷಿ ತೋಟಗಾರಿಕೆ, ಪಶು ವೈದ್ಯಕೀಯ ವಿಶ್ವವಿದ್ಯಾನಿಲಯ, ರಾಯಚೂರು / ಬಾಗಲಕೋಟೆ / ಶಿವಮೊಗ್ಗ / ಬೀದರ್ ಇವರುಗಳು ಸಂಬಂಧಪಟ್ಟ ಸಮೇತಿಗಳೊಂದಿಗೆ ಸಂಪರ್ಕಿಸಿ ಆಯ್ದ ತರಬೇತಿಗಳು ಅನುಷ್ಠಾನವಾಗುವಲ್ಲಿ ಸಹಕರಿಸುವುದು.
2. ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು ಮತ್ತು ಯೋಜನಾ ನಿರ್ದೇಶಕರು (ಆತ್ಮ-29 ಜಿಲ್ಲೆಗಳು) ಇವರ ಅಗತ್ಯ ಕ್ರಮಕ್ಕಾಗಿ ಮತ್ತು ಸಂಬಂಧಪಟ್ಟ ಸಮೇತಿ ಕೇಂದ್ರಗಳು ಸೂಚಿಸುವ ತರಬೇತಿ ಕ್ಯಾಲೆಂಡರ್ 2020-21ರನ್ವಯ ಪ್ರತಿ ತಂಡಕ್ಕೆ ಸಂಬಂಧಪಟ್ಟ ಮತ್ತು ನಿಗಧಿತ ಸಂಖ್ಯೆಯಲ್ಲಿ ಅಭ್ಯರ್ಥಿಗಳನ್ನು ತಪ್ಪದೇ ನಿಯೋಜಿಸುವಂತೆ ಸೂಚಿಸಿದೆ.
3. ಕೃಷಿ ಆಯುಕ್ತರು / ಕೃಷಿ ನಿರ್ದೇಶಕರು, ಆಪ್ತ ಸಹಾಯಕರು, ಕೇಂದ್ರ ಕಛೇರಿ ಬೆಂಗಳೂರು ಇವರ ಮಾಹಿತಿಗಾಗಿ.

"E:\New-2015\Files\Letters\1-Kannada Letters\4-Kannada letters (2020-21).docx"

ಅನುಬಂಧ

# State Extension Work Plan for 2020-21 in Karnataka State

(Rs. In Lakhs)

| S.No | Activities | State HQ | | SAMETI(S) | | SAMETI(N) | | Total | |
|---|---|---|---|---|---|---|---|---|---|
| | | Phy | Fin | Phy | Fin | Phy | Fin | Phy | Fin |
| A | State Level Activities | | | | | | | | |
| A-1 | Monitoring and Evaluation | | | | | | | | |
| | a) Quarterly review workshops and R-E Interfaces (pre-seasonal) | | | 2 | 1.50 | 1 | 0.75 | 3 | 2.25 |
| | b) Concurrent Monitoring & Evaluation | 1 | 10.00 | | | | | 1 | 10.00 |
| | c) Expenses for Inter Departmental Working Group on extension reforms and other contingencies including Operational support TA/ DA, hiring of vehicle/POL, and contingencies for SNO and State Coordinator | L.S. | 7.00 | | | | | L.S. | 7.00 |
| A-2 | a) Training courses – (SAMETI) level-Both Govt. & Non-Govt. extension functionaries (including NGOs, Para Extension Workers, Input Suppliers, Farmer Friends, ATM, BTM, PD, DPD) Technology related only including skill development for rural youths. (174X5X3 daysx0.015/) | | | 1410 | 21.15 | 1200 | 18.00 | 2610 | 39.15 |
| | b) Induction Training of ATMA functionaries -Four batches (0.010/day/Participant for 120 members for 6 days) | | | 360 | 3.60 | 360 | 3.60 | 720 | 7.20 |
| | c) Refresher Training of all ATMA functionaries (0.010 /day/Participant (174X10 staffX3 days) | | | 2820 | 28.20 | 2400 | 24.00 | 5220 | 52.20 |
| | d) Development of Quality Resource Material for Training & HRD Interventions (0.015 /day/Participant) -30 members | | | 20 | 0.30 | 10 | 0.15 | 30 | 0.45 |
| A-3 | Exposure Visit of extension functionaries and PRI members to progressive states. (A group of minimum 5 members per Block for 7 days) (5*174*7) | | | 3290 | 32.90 | 2800 | 28.00 | 6090 | 60.90 |
| A-4 | Organization of State level exhibitions/Kisan Melas/Fruit/ Vegetable shows, etc., (6 UAS @ Rs.1.00 Lakh) | 6 | 6.00 | | | | | 6 | 6.00 |
| A-5 | Krishi Expo & Regional Fair - Participation in Krishi Expo organized by DAC. | L.S. | 0.00 | | | | | L.S. | 0.00 |
| A-6 | Award for best performing ATMA (per year) | 0 | 0.00 | | | | | 0 | 0.00 |

(Rs. In Lakhs)

| S.No | Activities | State HQ | | SAMETI(S) | | SAMETI(N) | | Total | |
|---|---|---|---|---|---|---|---|---|---|
| | | Phy | Fin | Phy | Fin | Phy | Fin | Phy | Fin |
| A-7 | a) **Farmer Awards – Best farmers representing different areas of agriculture** | | | | | | | | |
| | * State level (0.50/year/farmer) | 10 | 5.00 | | | | | 10 | 5.00 |
| | b) Incentive for Exemplary Extension Work to District/ Block level Extension functionaries (0.25/season for kharif, rabi & summer) | 0 | 0.00 | | | | | 0 | 0.00 |
| | c) Incentivising Scientists and ext. personnel(Lumpsum) | 0 | 0.00 | | | | | 0 | 0.00 |
| | d) Lumpsum grant for PPP model (up to 500 lakhs) | 0 | 0.00 | | | | | 0 | 0.00 |
| A-8 | **State Agricultural Management and Extension Training Institute (SAMETI) ( Admn.Expenses)** | | | | | | | | |
| | a) Operational Expenses (Rs. 9 Lakhs / SAMETI's) | | | 1 | 9.00 | 1 | 9.00 | 2 | 18.00 |
| | b) Documentation of success stories etc., (preparation and dissemination)/year. | | | 1 | 2.50 | 1 | 2.50 | 2 | 5.00 |
| | c) Vehicle hiring and POL/year (per 2 SAMETI'S) | | | 1 | 2.00 | 1 | 2.00 | 2 | 4.00 |
| | **Non – Recurring** | | | | | | | | |
| | d) Equipment/year | | | | | | | | |
| | e) One time grant for building maintenance/furnishing of training halls | | | | | | | | |
| C. | **Innovative Activities – State Level** | | | | | | | | |
| C.1 | Implementation of Extension Activities through Agri-preneurs trained under Agri-Clinic Scheme or any other Scheme | | | L.S. | 0.00 | L.S. | 0.00 | L.S. | 0.00 |
| C.2 | PG Diploma in Agricultural Extension through MANAGE as suggested by GOI @ 15,000/- per candidate. | 100 | 15.00 | | | | | 100 | 15.00 |

(Rs. In Lakhs)

| S.No | Activities | State HQ | | SAMETI(S) | | SAMETI(N) | | Total | |
|---|---|---|---|---|---|---|---|---|---|
| | | Phy | Fin | Phy | Fin | Phy | Fin | Phy | Fin |
| E. | **Other Innovative Activity** | | | | | | | | |
| E.1 | Innovative activities – State component | L.S. | 0.00 | | | | | L.S. | 0.00 |
| G. | **Manpower Component** | | | | | | | | |
| 1 | State Coordinator | 1 | 6.00 | | | | | 1 | 6.00 |
| 2 | Gender Coordinator | 1 | 4.80 | | | | | 1 | 4.80 |
| 3 | Computer Programmers @ SAMETI's (2X16,000/-X12) | | | 1 | 1.92 | 1 | 1.92 | 2 | 3.84 |
| 4 | Dy. Directors (SAMETI) (2*4*44,400/-X12) | | | 4 | 21.31 | 4 | 21.31 | 8 | 42.624 |
| TOTAL | | 119 | 53.80 | 7910 | 124.38 | 6779 | 111.23 | 14808 | 289.414 |

01/09/20

**Commissioner for Agriculture**